# 2015–16ನೇ ಸಾಲಿಗೆ ಸದಸ್ಯರಿಗೆ ನಿರ್ದೇಶಕರ ವರದಿ

**ಪ್ರಿಯ ಸದಸ್ಯರೇ,**

ದಿನಾಂಕ 31–03–2016ಕ್ಕೆ ಅಂತ್ಯಗೊಂಡ ವರ್ಷದ ಕಂಪನಿಯ ಲೆಕ್ಕ ಪರಿಶೋಧನಾ ವರದಿ ಸಹಿತ 70ನೇ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ನಿಮ್ಮ ನಿರ್ದೇಶಕರುಗಳು ಅತೀವವಾಗಿ ಹರ್ಷಿಸುತ್ತಾರೆ.

## ಸಂಸ್ಥಾ ದೃಷ್ಟಿ ಮತ್ತು ಧ್ಯೇಯ :

- **ಸಂಸ್ಥಾ ದೃಷ್ಠಿ –** ಶಕ್ತಿಯುತ, ಸ್ವಾವಲಂಬಿ ಹಾಗೂ ಮಹತ್ತರ ಗಣಿ ಕಂಪನಿಯಾಗುವುದು.
- **ಸಂಸ್ಥಾ ಧ್ಯೇಯ –** ಸುರಕ್ಷೆ ಮತ್ತು ಆರೋಗ್ಯಕರ ಗಣಿಗಾರಿಕೆಯ ವಾತಾವರಣವನ್ನು ನಿರ್ಮಿಸುವುದು ಮತ್ತು ದೀರ್ಘಕಾಲೀನ ಬೆಳವಣಿಗೆ ಮತ್ತು ಅಭಿವೃದ್ಧಿ ಸಾಧಿಸುವುದು ಮತ್ತು ಉತ್ಪಾದಕತೆ ಮತ್ತು ಲಾಭವನ್ನು ಹೆಚ್ಚಿಸುವುದು; ಉತ್ತಮವಾದ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸಲೋಸುಗ ಕೈಗಾರಿಕಾ ಸಂಬಂಧವನ್ನು ಮತ್ತೂ ಉತ್ತೇಜಿಸುವುದು; ಹಟ್ಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಸ್ಥಿತಿ ಮತ್ತು ಸಮುದಾಯ ಕಾರ್ಯಕ್ರಮಗಳನ್ನು ಉತ್ತೇಜಿಸುವುದು; ಆಧುನಿಕ ಮತ್ತು ಪರಿಣಾಮಕಾರಿಯಾದ ನಿರ್ವಹಣಾ ನಿಯಂತ್ರಣಗಳನ್ನು ಅಳವಡಿಸುವುದು.

## ಉತ್ಪಾದನೆ ಮತ್ತು ನಿರ್ವಹಣಾ ಫಲಿತಾಂಶಗಳು

| ಕ್ರಮ ಸಂಖ್ಯೆ | ವಿವರಗಳು | 2014-15ರ ಆರ್ಥಿಕ ವರ್ಷ | 2015-16ರ ಆರ್ಥಿಕ ವರ್ಷ |
|---|---|---|---|
| 1. | **ಅರೆಯಲಾದ/ಸಂಸ್ಕರಿಸಲಾದ ಅದಿರು(ಮೆಟ್ರಿಕ್ ಟನ್ನುಗಳಲ್ಲಿ)** | | |
| | ಹಟ್ಟಿ ಗಣಿ | 468735 | 524617 |
| | ಊಟಿ ಗಣಿ | 48023 | 23562 |
| | ಹೀರಾಬುದ್ದಿನಿ ಗಣಿ | 23961 | 68 |
| | ಒಟ್ಟು | 540719 | 548247 |
| 2. | **ಉತ್ಪಾದಿಸಲಾದ ಚಿನ್ನ(ಗ್ರಾಂಗಳಲ್ಲಿ)** | 1432041 | 1309769 |
| 3. | **ವಾಯುಯಂತ್ರಗಳಿಂದ ಉತ್ಪಾದಿಸಲಾದ ವಾಯುವಿದ್ಯುಚ್ಛಕ್ತಿ (ಕಿಲೋವ್ಯಾಟ್ಸ್)** | 25035559 | 21434098 |
| 4. | **ವಹಿವಾಟು (ಲಕ್ಷ ರೂ.ಗಳಲ್ಲಿ)** | | |
| | ಎ. ಚಿನ್ನ ಮತ್ತು ಬೆಳ್ಳಿಯ ಮಾರಾಟ(ಅಬ್ಕಾರಿ ಸುಂಕ ಹೊರತುಪಡಿಸಿ) | 34128 | 34213 |
| | ಬಿ. ವಾಯುವಿದ್ಯುತ್ | 851 | 729 |
| | ಸಿ. ಇತರೆ ಆದಾಯ | 6470 | 5908 |
| | **ಒಟ್ಟು (ಎ+ಬಿ+ಸಿ)** | 41449 | 40850 |

| | | | |
|---|---|---|---|
| 5. | ಬಡ್ಡಿ ಮತ್ತು ಸವಕಳಿ ಮುಂಚಿನ ಲಾಭ | 10965 | 3952 |
| 6. | ಸವಕಳಿಗಾಗಿನ ಏರ್ಪಾಡು | 2701 | 2734 |
| 7. | ತೆರಿಗೆ ಮುಂಚಿನ ಲಾಭ | 8244 | 1201 |
| 8. | ತೆರಿಗೆಗಾಗಿನ ಏರ್ಪಾಡು | 1610 | 568 |
| 9. | ತೆರಿಗೆ ನಂತರ ನಿವ್ವಳ ಲಾಭ | 6634 | 633 |
| 10. | ವಿತರಣೆ | | |
| | ಮುಂದಕ್ಕೆ ತರಲಾದ ಲಾಭದ ಶಿಲ್ಕು | 86432 | 90632 |
| | ಆದಾಯ ತೆರಿಗೆಯಿಂದ (ನಿವ್ವಳ) ವರ್ಗಾವಣೆ | – | 541 |
| | ಸವಕಳಿ ಮೀಸಲಾತಿ – ಸರಿಹೊಂದಿಸಲಾದದ್ದು | 1267 | 32 |
| | ವರ್ಷದ ಲಾಭ/(ನಷ್ಟ) | 6634 | 633 |
| | ಉದ್ದೇಶಿತ ಲಾಭಾಂಶ | 296 | - |
| | ಉದ್ದೇಶಿತ ಲಾಭಾಂಶ ಮೇಲಿನ ತೆರಿಗೆ | 51 | - |
| | ಸಾಮಾನ್ಯ ಮೀಸಲಿಗೆ ವರ್ಗಾವಣೆ | 820 | - |
| | ಸ್ಥಿತಿ ವಿವರಣಾ ಪಟ್ಟಿಗೆ ಕೊಂಡೊಯ್ಯಲಾದ ಹೆಚ್ಚಳ | 90632 | 91774 |

2015–16ನೇ ಆರ್ಥಿಕ ವರ್ಷದ ನಿರ್ವಹಣೆಯ ಮುಖ್ಯಾಂಶಗಳು :

1. ಪ್ರಸ್ತುತ ವರ್ಷದಲ್ಲಿ ಅರೆಯಲಾದ/ಸಂಸ್ಕರಿಸಲಾದ ಅದಿರು 548247 ಟನ್ನುಗಳಾಗಿದ್ದು, ಅದು ಕಳೆದ ವರ್ಷ 2014–15ರಲ್ಲಿನ 540719 ಟನ್ನುಗಳಿಗೆ ಹೋಲಿಸಿದಾಗ 7528 ಟನ್ನುಗಳಷ್ಟು ಅಲ್ಪ ಏರಿಕೆ ಉಂಟಾಗಿದೆ.

2. ಕಳೆದ ವರ್ಷ 2014–15ರಲ್ಲಿ ಉತ್ಪಾದಿಸಲಾದ 1432.04 ಕೆ.ಜಿ. ಚಿನ್ನದ ಬದಲಿಗೆ ಪ್ರಸ್ತುತ ವರ್ಷದಲ್ಲಿ ಉತ್ಪಾದಿಸಲಾದ ಚಿನ್ನವು 1309.77 ಕೆ.ಜಿ.ಗಳಾಗಿ, ಅದು 122.27 ಕೆ.ಜಿ. ಗಳಷ್ಟು ಚಿನ್ನದಲ್ಲಿ ಇಳಿಕೆ(ಶೇ.8.50) ಉಂಟಾಗಿದೆ. ಇದಕ್ಕೆ ಪ್ರಮುಖವಾಗಿ ಪ್ರತಿಟನ್ನಿಗೆ 2.39 ಗ್ರಾಂಗಳುಳ್ಳ ಕಡಿಮೆ ದರ್ಜೆಯ ಅದಿರೇ ಕಾರಣವಾಗಿದ್ದು. ಅದು ಕಳೆದ ವರ್ಷ 2014–15ರಲ್ಲಿ ಪ್ರತಿ ಟನ್ನಿಗೆ 2.65 ಗ್ರಾಂಗಳುಳುಳ್ಳ ಅದಿರಾಗಿತ್ತು. ಹೀಗಾಗಲು 2000 ಹಂತಕ್ಕೆ ಮೇಲ್ಪಟ್ಟ ಸ್ತರದಲ್ಲಿನ ಸ್ಟೋಪ್‌ಗಳಲ್ಲಿ ಉತ್ತಮ ದರ್ಜೆಯ ಅದಿರು ಇಲ್ಲದಿರುವುದೇ ಕಾರಣವಾಗಿದೆ.

3. ಪ್ರಸ್ತುತ ವರ್ಷದಲ್ಲಿನ ಚಿನ್ನ ಮತ್ತು ಬೆಳ್ಳಿಯ ಮಾರಾಟದಿಂದಾದ ವಹಿವಾಟು 34212.91 ಲಕ್ಷ ರೂ.ಗಳಾಗಿದ್ದು, ಅದು ಕಳೆದ ವರ್ಷ 2014–15ರಲ್ಲಿ 34127.56 ಲಕ್ಷ ರೂ.ಗಳಾಗಿದ್ದು. ಅಲ್ಪ ಪ್ರಮಾಣದ 85.35 ಲಕ್ಷ ರೂ.ಗಳಷ್ಟು ಏರಿಕೆಯಾಗಿದೆ. ಮಾರಾಟ ಮಾಡಲಾದ ಚಿನ್ನದ ಪರಿಮಾಣದಲ್ಲಿ 59.79 ಕೆಜಿಯಷ್ಟು ಏರಿಕೆಯಾಗಿ ಅದು 1413.75 ಕೆ.ಜಿ ಆಗಿದ್ದು ಅದು ಕಳೆದ ವರ್ಷದ 1353.96 ಕೆ.ಜಿ.ಗಳಾಗಿದ್ದಾಗ್ಯೂ, ಚಿನ್ನದ ಸರಾಸರಿ ಬೆಲೆಯಲ್ಲಿ (ಅಬ್ಕಾರಿ ಸುಂಕದ ಹೊರತಾಗಿ) ಪ್ರತಿ ಗ್ರಾಂ.ಗೆ 100 ರೂ.ಗಳಷ್ಟು ಇಳಿಕೆಯಾಗಿತ್ತು, ಎಂದರೆ ಶೇ.4 ರಂತೆ ಪ್ರತಿಗ್ರಾಂ.ಗೆ 2517 ರೂ.ಗಳಿಂದ 2417 ಆಯಿತು. ಉತ್ಪಾದನಾ ವೆಚ್ಚವು ಪ್ರತಿಗ್ರಾಂಗೆ 2681 ರೂ.ಗಳಾಗಿದ್ದು ಅದು ಕಳೆದ ವರ್ಷ 2259 ರೂ.ಗಳಷ್ಟಿದ್ದು ಎಂದರೆ ಪ್ರತಿಗ್ರಾಂಗೆ 422 ರೂ.ಗಳಷ್ಟು (ಶೇ.18) ಏರಿಕೆ ಉಂಟಾಯಿತು.

4. ಕಳೆದ ವರ್ಷ 2014–15ರಲ್ಲಿ ಉತ್ಪಾದಿಸಿ ಮಾರಾಟ ಮಾಡಲಾದ, 2.50 ಕೋಟಿ ಕೆಡಬ್ಲ್ಯುಹೆಚ್ ವಾಯು ವಿದ್ಯುತ್ತಿಗೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿ ಉತ್ಪಾದಿಸಿ ಮಾರಾಟ ಮಾಡಲಾದದು 2.14 ಕೋಟಿ ಕೆಡಬ್ಲ್ಯುಹೆಚ್‌ಗಳಾಗಿದ್ದು. ಅದು 36 ಲಕ್ಷ ಕೆಡಬ್ಲ್ಯುಹೆಚ್ ಗಳಷ್ಟು (ಶೇ.14) ಇಳಿಕೆಯಾಗಿದೆ. ತತ್ಪರಿಣಾಮವಾಗಿ ವಾಯು ವಿದ್ಯುತ್ ಮಾರಾಟ ಮೊತ್ತವು 728.76 ಲಕ್ಷ.ರೂಗಳಾಗಿದ್ದು, ಅದು 2014–15ನೇ ವರ್ಷದಲ್ಲಿ 851.21 ಲಕ್ಷ ರೂ.ಗಳಾಗಿದ್ದಿತು. ಕಳೆದ ವರ್ಷದಲ್ಲಿ ಪ್ರತಿ ಕೆಡಬ್ಲ್ಯುಹೆಚ್‌ನ ಬೆಲೆಯು ರೂ.3.40 ಗಳಾಗಿದ್ದಂತೆಯೆ ಇದ್ದು ವಾಯು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆಗೆ ಪ್ರಮುಖವಾಗಿ ಜನರೇಟರುಗಳು ಪದೇ ಪದೇ ಕೆಟ್ಟು ಹೋಗುತ್ತಿದ್ದದು ಮತ್ತು ಮಾರುತ ಬೀಸುವಿಕೆಯಲ್ಲಿನ ಕಡಿಮೆ ತೀವ್ರತೆಯೇ ಕಾರಣವಾಗಿದೆ.

5. ಬಡ್ಡಿ–ಸವಕಳಿ ಮತ್ತು ತೆರಿಗೆಗಳ ಮುಂಚಿನ ಲಾಭವು 3952.37 ಲಕ್ಷ ರೂ.ಗಳಾಗಿದ್ದು ಅದು ಕಳೆದ ವರ್ಷ 2014–15ರಲ್ಲಿ 7012.70 ಲಕ್ಷರೂ.ಗಳಾಗಿದ್ದು, ಶೇ.63.95 ರಷ್ಟು ಇಳಿಕೆಯಾಗಿದೆ.

6. ಪ್ರಸ್ತುತ ವರ್ಷದಲ್ಲಿನ ತೆರಿಗೆ ಮುಂಚಿನ ಲಾಭವು 1201.28 ಲಕ್ಷ ರೂ.ಗಳಾಗಿದ್ದು ಅದು ಕಳೆದ ವರ್ಷ 2014–15ರಲ್ಲಿ 8244.23 ಲಕ್ಷ ರೂ.ಗಳಾಗಿದ್ದು, 7042.95 ಲಕ್ಷ ರೂ.ಗಳಷ್ಟು (ಶೇ.85.42) ಇಳಿಕೆಯಾಗಿದೆ.

7. ತೆರಿಗೆಯ ನಂತರ ಲಾಭವು 632.77 ಲಕ್ಷ ರೂ.ಗಳಾಗಿದ್ದು, ಅದು ಕಳೆದ ವರ್ಷದ 6634.46 ಲಕ್ಷ ರೂ.ಗಳಾಗಿದ್ದು ಶೇ.90 ರಷ್ಟು ಇಳಿಕೆಯಾಗಿದೆ.

8. ಘಟಕವಾರು ಲಾಭವು ಈ ಕೆಳಕಂಡಂತಿದೆ

| | | | |
|---|---|---|---|
| | | | (ರೂ. ಲಕ್ಷಗಳಲ್ಲಿ) |
| (i) | ಚಿನ್ನದ ಘಟಕ | – | (–) 3512.00 |
| (ii) | ವಾಯು ವಿದ್ಯುತ್ ಘಟಕ | – | (+) 173.20 |

ಚಿನ್ನದ ಘಟಕದಲ್ಲಿ ಉಂಟಾದ ನಷ್ಟವನ್ನು ಇತರೆ ಆದಾಯಗಳಿಂದ ಭರಿಸಲಾಯಿತು.

9. ಕಳೆದ ವರ್ಷಕ್ಕೆ ಹೋಲಿಸಿದಾಗ ಪ್ರಸ್ತುತ ವರ್ಷದಲ್ಲಿನ ತೆರಿಗೆ ಮುಂಚಿನ ಲಾಭದಲ್ಲಿನ ಇಳಿಕೆಯ ಕಾರಣಗಳನ್ನು ಈ ಕೆಳಕಂಡಂತೆ ಸಾರಾಂಶಗೊಳಿಸಬಹುದು

| | | | |
|---|---|---|---|
| | | | ಕೋಟಿ ರೂ.ಗಳಲ್ಲಿ |
| 1. | ಚಿನ್ನದ ಸರಾಸರಿ ಮಾರಾಟ ಬೆಲೆಯಲ್ಲಿನ ಇಳಿಕೆ | | 14.15 |
| 2. | ವೆಚ್ಚಗಳಲ್ಲಿನ ನಿವ್ವಳ ಏರಿಕೆ | | 17.25 |
| | ಪ್ರಮುಖ ವೆಚ್ಚಗಳು | | |
| | ವಿದ್ಯುಚ್ಛಕ್ತಿ ಮತ್ತು ಇಂಧನ | 2.60 | |
| | ದುರಸ್ತಿ ಮತ್ತು ನಿರ್ವಹಣೆ | 2.60 | |
| | ರಾಜಧನ | 7.00 | |
| | ಮುಖ್ಯ ರೀಫ್‌ನ ಅಭಿವೃದ್ಧಿ | 2.00 | |
| | ದಕ್ಷಿಣ ಹಟ್ಟಿ ಮತ್ತು ಗ್ರೇ ಶಾಫ್ಟ್ ಮತ್ತು ಅಭಿವೃದ್ಧಿ | 9.40 | |
| | ಭೂಸ್ವಾಧೀನ ವೆಚ್ಚಗಳು | 3.00 | |
| | ಸಾಂಸ್ಥಿಕ ಜವಾಬ್ದಾರಿ, ದೇಣಿಗೆಗಳು ಮತ್ತು ಇತರೇ ಆಡಳಿತಾತ್ಮಕ ವೆಚ್ಚಗಳು | (6.00) | |
| | ಸರಕುಗಳ ಮತ್ತು ಬಿಡಿಭಾಗಗಳ ಬಳಕೆ ಮತ್ತು ಸಾಗಣೆ ಮತ್ತು ಸಾರಿಗೆ | (3.35) | |
| 3. | ಇತರೆ ಆದಾಯದಲ್ಲಿನ ಇಳಿಕೆ | | 6.15 |
| 4. | ಸವಕಳಿಯಂತಹ ನಗದಲ್ಲದ ಐಟಂಗಳು ಮತ್ತು ದಾಸ್ತಾನಿನಲ್ಲಿನ ಬದಲಾವಣೆ | | 32.88 |
| | (ಮಾರಾಟ ಬೆಲೆಯ ಹೊಂದಾಣಿಕೆ ಹೊರತುಪಡಿಸಿ) | | 70.43 |

10. ಪ್ರತಿ ಷೇರಿನ ಮೇಲಿನ ಗಳಿಕೆ (100 ರೂ. ಮುಖ ಬೆಲೆಯ ಷೇರು) = ರೂ.214/–

11. ಪ್ರತಿ ಷೇರಿನ ಪ್ರಸ್ತುತ ಮೌಲ್ಯ (100 ರೂ. ಮುಖ ಬೆಲೆಯ ಷೇರು) = ರೂ.36,773/–

12. ನಿವ್ವಳ ಮೌಲ್ಯ 1089.24 ಕೋಟಿ ರೂ.ಗಳು

**ಲಾಭಾಂಶ**

ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರ ಅನುಮೋದನೆಗೆ ಒಳಪಟ್ಟು ಸಂದಾಯಿತ ಬಂಡವಾಳದ ಮೇಲೆ 74.05 ಲಕ್ಷ ರೂ.ಗಳಷ್ಟು ಮೊತ್ತವಾಗುವ ಲಾಭಾಂಶವನ್ನು ಶೇ.25 ರಂತೆ ನೀಡಲು ನಿಮ್ಮ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ. ಕಂಪನಿ ಕಾಯಿದೆ 2013ರ ಸೆಕ್ಷನ್ 124ರನ್ವಯ, ಏಳು ವರ್ಷಗಳಿಂದ ಕ್ಲೇಮು ಮಾಡಿಲ್ಲದ ಲಾಭಾಂಶದವನ್ನು ಕೇಂದ್ರ ಸರ್ಕಾರದ 'ಹೂಡಿಕೆದಾರರ ಶಿಕ್ಷಣ ಮತ್ತು ಕಲ್ಯಾಣನಿಧಿ'ಗೆ ವರ್ಗಾಯಿಸಬೇಕಿರುತ್ತದೆ. 31ನೇ ಮಾರ್ಚ್ 2016ರಂದು ಕ್ಲೇಮು ಮಾಡಿಲ್ಲದ ಲಾಭಾಂಶವು ರೂ. 9.06 ಲಕ್ಷ ರೂ.ಗಳಾಗಿದ್ದು, ಅದನ್ನು ಕೇಂದ್ರ ಸರ್ಕಾರದ ಮೇಲ್ಕಂಡ ನಿಧಿಗೆ ಅನ್ವಯವಾಗುವ ಆಯಾ ದಿನಾಂಕದಂದು ವರ್ಗಾಯಿಸಲಾಗುವುದು,

**ನಿರ್ದೇಶಕರುಗಳು ಮತ್ತು ಪ್ರಮುಖ ಆಡಳಿತಾತ್ಮಕ ಸಿಬ್ಬಂದಿ :**

ಪ್ರಸ್ತುತ ವರ್ಷದಲ್ಲಿ, ನಿರ್ದೇಶಕರುಗಳ ಬಗೆಗೆ ಈ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

| ಕ್ರಮ ಸಂಖ್ಯೆ | ಹೆಸರು | ನೇಮಕಾತಿಯ ದಿನಾಂಕ | ಅಧಿಕಾರ ಸಮಾಪ್ತಿ ದಿನಾಂಕ | ನೇಮಕಾತಿ ಸ್ವರೂಪ |
|---|---|---|---|---|
| 1. | ಶ್ರೀಮತಿ ರಾಣಿ ಸತೀಶ್, ಮಾಜಿ ಸಚಿವರು | 24.11.2014 | 24-8-2016 | ಅಧ್ಯಕ್ಷರು |
| 2. | ಶ್ರೀ ಜ಼ಿಯಾವುಲ್ಲಾ, ಐ.ಎ.ಎಸ್. | 04–1–2016 | 17–8–2016 | ವ್ಯವಸ್ಥಾಪಕ ನಿರ್ದೇಶಕರು |
| 3. | ಶ್ರೀ ಟಿ.ಎಚ್.ಎಂ. ಕುಮಾರ್, ಐ.ಎ.ಎಸ್. | 17–8–2016 | – | ವ್ಯವಸ್ಥಾಪಕ ನಿರ್ದೇಶಕರು |
| 4. | ಶ್ರೀ ಎ. ಕೆ. ಮೊನ್ನಪ್ಪ, ಐ.ಎ.ಎಸ್. | 01.10.2011 | 31-12-2015 | ವ್ಯವಸ್ಥಾಪಕ ನಿರ್ದೇಶಕರು |
| 5. | ಶ್ರೀ ನಿಲಯ್ ಮಿತಾಶ್, ಐ.ಎ.ಎಸ್. | 27–7–2015 | – | ನಿರ್ದೇಶಕರು |
| 6. | ಶ್ರೀ ತುಷಾರ್ ಗಿರಿನಾಥ್, ಐ.ಎ.ಎಸ್. | 31-8-2015 | - | ನಿರ್ದೇಶಕರು |
| 7. | ಶ್ರೀ ಅರವಿಂದ ಶ್ರೀವಾಸ್ತವ ಐ.ಎ.ಎಸ್. | 13.06.2013 | - | ನಿರ್ದೇಶಕರು |
| 8. | ಶ್ರೀ ನವೀನ್‌ರಾಜ್ ಸಿಂಗ್, ಐ.ಎ.ಎಸ್. | 13.01.2015 | - | ನಿರ್ದೇಶಕರು |
| 9. | ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಐ.ಎ.ಎಸ್. | 05–01–2016 | – | ನಿರ್ದೇಶಕರು |
| 10. | ಶ್ರೀ ಎಸ್. ಶಂಕರನಾರಾಯಣ, ಐ.ಎ.ಎಸ್ | 01–10–2013 | 05–01–2016 | ನಿರ್ದೇಶಕರು |
| 11. | ಶ್ರೀ ಜಿ. ಲಿಂಗಮೂರ್ತಿ, ಕೆ.ಎ.ಎಸ್. | 19.09.2013 | 31-8-2016 | ನಿರ್ದೇಶಕರು |
| 12. | ಶ್ರೀಮತಿ ಎಲ್. ರಾಜೇಶ್ವರಿ | 16.02.2015 | - | ನಿರ್ದೇಶಕರು |
| 13. | ಶ್ರೀ ಸಿ.ಕೆ. ಅಶೋಕ್‌ಕುಮಾರ್ | 06–05–2016 | – | ನಿರ್ದೇಶಕರು |
| 14. | ಶ್ರೀ ಪಿ. ನಾಗರಾಜು | 06–05–2016 | – | ನಿರ್ದೇಶಕರು |
| 15. | ಶ್ರೀ ಹೆಚ್. ಸಂಪತ್ಕುಮಾರ್ | 06–05–2016 | – | ನಿರ್ದೇಶಕರು |
| 16. | ಶ್ರೀ ಸೆಯ್ಯದ್ ಹಜ಼ರತುಲ್ಲ | 06–05–2016 | – | ನಿರ್ದೇಶಕರು |

ಮೇಲ್ಕಂಡರವರಲ್ಲದೇ, ಕಂಪನಿಯ ನಾಲ್ಕು ಪ್ರಮುಖ ಆಡಳಿತಾತ್ಮಕ ಸಿಬ್ಬಂದಿಗಳಾದ ಶ್ರೀ ಎ.ಆರ್. ವಾಲ್ಮೀಕಿ, ಕಾರ್ಯನಿರ್ವಾಹಕ ನಿರ್ದೇಶಕರು, ಶ್ರೀ ಎನ್.ಎಮ್. ಹುಂಚಿಯಾಳಿ, ಕಾರ್ಯನಿರ್ವಾಹಕ ನಿರ್ದೇಶಕ–(ಸಾಂಸ್ಥಿಕ ವ್ಯವಹಾರಗಳು), ಡಾ. ಪ್ರಭಾಕರ್ ಸಂಗುರುಮಠ್, ಪ್ರಧಾನ ವ್ಯವಸ್ಥಾಪಕರು (ಸಮನ್ವಯ) ಮತ್ತು ಶ್ರೀ ಪ್ರಕಾಶ್, ಪ್ರಧಾನ ವ್ಯವಸ್ಥಾಪಕರು(ಗಣಿಗಾರಿಕೆ)ರವರುಗಳನ್ನು ಹೊಂದಿದೆ.

**ಪ್ರಕಟಣಾ ವಿಷಯಗಳು :**

**ಎ. ಲೆಕ್ಕಪರಿಶೋಧನಾ ಸಮಿತಿ**

ನಿರ್ದೇಶಕ ಮಂಡಳಿಯು ಕೆಳಗಿನ ನಿರ್ದೇಶಕರನ್ನೊಳಗೊಂಡ ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಿದೆ.

| | | | |
|---|---|---|---|
| 1. | ಶ್ರೀ ಅರವಿಂದ ಶ್ರೀವಾಸ್ತವ, ಐಎಎಸ್ | – | ಅಧ್ಯಕ್ಷರು |
| 2. | ಶ್ರೀ ಟಿ.ಎಚ್.ಎಂ. ಕುಮಾರ್, ಐಎಎಸ್ | – | ಸದಸ್ಯರು |
| 3. | ಶ್ರೀ ನವೀನ್ ರಾಜ್ ಸಿಂಗ್, ಐಎಎಸ್ | – | ಸದಸ್ಯರು |

ಕಂಪನಿ ಕಾಯಿದೆ 2013ರ ಸೆಕ್ಷನ್ 177ರ ಅನ್ವಯ ನಿರ್ದೇಶಕ ಮಂಡಳಿಯು ಒಪ್ಪಿಸಿದ ವ್ಯವಹಾರಗಳನ್ನು ನಡೆಸಲೋಸುಗ ಸಮಯಾನುಸಮಯಕ್ಕೆ ಮೇಲ್ಕಂಡ ಸಮಿತಿಯು ಸಭೆ ಸೇರುತ್ತದೆ.

**ಬಿ. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ**

ಕಂಪನಿಯು ಈ ಕೆಳಕಂಡ ನಿರ್ದೇಶಕರನ್ನೊಳಗೊಂಡ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ರಚಿಸಿದೆ.

| | | | |
|---|---|---|---|
| 1. | ಶ್ರೀ ಟಿ.ಎಚ್.ಎಂ. ಕುಮಾರ್, ಐ.ಎ.ಎಸ್. | – | ಅಧ್ಯಕ್ಷರು |
| 2. | ಶ್ರೀ ನವೀನ್ ರಾಜ್ ಸಿಂಗ್, ಐ.ಎ.ಎಸ್. | – | ಸದಸ್ಯರು |
| 2. | ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಐ.ಎ.ಎಸ್. | – | ಸದಸ್ಯರು |
| 3. | ಶ್ರೀಮತಿ ಎಲ್. ರಾಜೇಶ್ವರಿ | – | ಸದಸ್ಯರು |

ಈ ಮೇಲ್ಕಂಡ ಸಮಿತಿಯು, ಕಂಪನಿಯು ನಿರ್ವಹಿಸಬೇಕಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆ ಮತ್ತು ನೀತಿಗಳನ್ನು ರೂಪಿಸಿ ಅದನ್ನು ನಿರ್ದೇಶಕ ಮಂಡಳಿಗೆ ಶಿಫಾರಸ್ಸು ಮಾಡಲಾಗಿ ಅದನ್ನು ನಿರ್ದೇಶಕ ಮಂಡಳಿಯು ಅನುಮೋದಿಸಿರುತ್ತದೆ. ಈ ನೀತಿಗಳನ್ನು ಕಂಪನಿಯ ವೆಬ್‌ಸೈಟ್ **www.**huttigold.co.in. ನಲ್ಲಿ ನೋಡಬಹುದು. ಕಂಪನಿ ಕಾಯಿದೆ 2013ರ ಸೆಕ್ಷನ್135ರನ್ವಯ ಕಳೆದ ಮೂರು ವರ್ಷಗಳ ಸರಾಸರಿ ಲಾಭವಾದ 16180.45 ಲಕ್ಷ ರೂ.ಗಳ ಮೇಲೆ ಶೇ. 2ರಷ್ಟು ಮೊತ್ತವಾದ ರೂ. 323.70 ಲಕ್ಷ ರೂ.ಗಳನ್ನು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳೆಡೆಗೆ ಕಂಪನಿಯು ವ್ಯಯಿಸಿದೆ. ಸಾಮಾಜಿಕ ಜವಾಬ್ದಾರಿಯ ವಾರ್ಷಿಕ ವರದಿಯನ್ನು ಅನುಬಂಧ–I ರಲ್ಲಿ ತೋರಿಸಲಾಗಿದೆ.

**ಸಿ. ನಿರ್ದೇಶಕ ಮಂಡಳಿಯ ಸಭೆಗಳು**

ಪ್ರಸ್ತುತ ವರ್ಷದಲ್ಲಿ ನಿರ್ದೇಶಕ ಮಂಡಳಿಯು 6 ಬಾರಿ ಸಭೆ ಸೇರಿತ್ತು.

**ಡಿ. ನೀಡಲಾದ ಸಾಲಗಳ, ಮಾಡಲಾದ ಹೂಡಿಕೆಗಳ, ನೀಡಲಾದ ಖಾತರಿಗಳ ಮತ್ತು ಒದಗಿಸಲಾದ ಭದ್ರತೆಗಳ ವಿವರಗಳು–**

ಪ್ರಸ್ತುತ ವರ್ಷದಲ್ಲಿ ಯಾವುದೂ ಇಲ್ಲ.

**ಇ. ಶಕ್ತಿ ಸಂರಕ್ಷಣೆ, ತಂತ್ರಜ್ಞಾನದ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ವೆಚ್ಚಗಳು**

ವಿವರಗಳನ್ನು ಕಂಪನಿಯ ಕಾಯಿದೆಯ ರೀತ್ಯ ಅನುಬಂಧ–II ರಲ್ಲಿ ನೀಡಲಾಗಿದೆ.

**ಎಫ್. ವಾರ್ಷಿಕ ವರದಿಯ ಆಯ್ದ ಭಾಗಗಳು**

ಕಂಪನಿ ಕಾಯಿದೆ 2013ರ ಸೆಕ್ಷನ್ 92ರ ರೀತ್ಯ ವಾರ್ಷಿಕ ವರದಿಯ ಆಯ್ದ ಭಾಗಗಳನ್ನು ಅನುಬಂಧ–III ರಲ್ಲಿ ನೀಡಲಾಗಿದೆ.

**ಜಿ. ಕಂಪನಿ ಕಾಯಿದೆ 2013ರ ಸೆಕ್ಷನ್ 197ರ ರೀತ್ಯ ನೌಕರರಿಗೆ ಸಂಬಂಧಪಟ್ಟ ವಿವರಗಳು ಮತ್ತು ಪ್ರಕಟಣೆಗಳಡಿಯಲ್ಲಿ ನೀಡಬೇಕಾದ ವಿವರಗಳು**

ಈ ಬಗೆಗೆ ನೀಡಬೇಕಾದ ವಿವರಗಳು ಅನ್ವಯವಾಗುವ ಯಾವುದೇ ನೌಕರನೂ ಇಲ್ಲ.

**ಹೆಚ್. ಸಾಂಸ್ಥಿಕ ಆಳ್ವಿಕೆ**

ಕಂಪನಿಯ ಷೇರುಗಳು ಲಿಸ್ಟ್ ಆಗದೇ ಇರುವುದರಿಂದ ಸೆಬಿಯವರಿಂದ ನಿರ್ದಿಷ್ಟ ಪಡಿಸಲಾದ ಸಾಂಸ್ಥಿಕ ಆಳ್ವಿಕೆಯ ಯಾವುದೇ ಮಾನದಂಡಗಳು ಅನ್ವಯವಾಗುವುದಿಲ್ಲ. ಅಂತೆಯೇ ವ್ಯಾವಹಾರಿಕ ಜವಾಬ್ದಾರಿ ಹೇಳಿಕೆಗಳು ಮತ್ತು ಆಡಳಿತ ವರ್ಗದ ಹೇಳಿಕೆಗಳು ಮತ್ತು ವಿಶ್ಲೇಷಣೆಗಳೂ ಅನ್ವಯವಾಗುವುದಿಲ್ಲ.

**ಐ. ಕ್ರೋಢೀಕೃತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು**

ಕಂಪನಿಗೆ ಯಾವುದೇ ಅಂಗಸಂಸ್ಥೆ, ಸಹಭಾಗಿತ್ವ ಸಂಸ್ಥೆ ಮತ್ತು ಸಹೋದ್ಯೋಗಿ ಸಂಸ್ಥೆಗಳು ಇಲ್ಲದಿರುವುದರಿಂದ ಕಂಪನಿ ಕಾಯಿದೆಯೊಂದಿಗೆ ಓದಲಾದ ತತ್ಸಂಬಂಧಿತ ಲೆಕ್ಕಾಚಾರ ಮಾನದಂಡಗಳು ಅನ್ವಯವಾಗುವುದಿಲ್ಲ.

**ಜೆ. ವಿಚಕ್ಷಣಾ ಸಂಯೋಜನೆ**

ವಿಚಕ್ಷಣಾ ಸಂಯೋಜನಾ ನೀತಿಗಳನ್ನು ಕಂಪನಿಯಲ್ಲಿ ಅಳವಡಿಸಲಾಗುತ್ತಿದೆ.

**ಕೆ. ಇತರೇ ಸಾಮಾನ್ಯ ಪ್ರಕಟಣೆಗಳು**

ಈ ಕೆಳಕಂಡ ವಿಷಯಗಳ ಬಗೆಗೆ ಯಾವುದೇ ವ್ಯವಹಾರಗಳು ಪ್ರಸ್ತುತ ವರ್ಷದಲ್ಲಿ ನಡೆಯದೇ ಇರುವುದರಿಂದ, ನಿಮ್ಮ ನಿರ್ದೇಶಕರುಗಳು ಆ ಬಗ್ಗೆ ಮಾಡಬೇಕಾದ ಯಾವುದೇ ಪ್ರಕಟಣೆಗಳು ಇಲ್ಲವೆಂದು ತಿಳಿಸುತ್ತಾರೆ.

1. ಕಾಯಿದೆಯ ಅಧ್ಯಾಯ Vರ ಅಡಿಯಲ್ಲಿ ಯಾವುದೇ ನಿಗದಿತ ಠೇವಣಿಗಳ ಬಗೆಗಿನ ವಿವರಗಳು.
2. ಲಾಭಾಂಶ, ಮತ ಮತ್ತು ಇತರೇ ವಿಷಯಗಳ ಮೇಲೆ ತಾರತಮ್ಯ ಹಕ್ಕುಳ್ಳ ಯಾವುದೇ ಈಕ್ವಿಟಿ ಷೇರುಗಳನ್ನು ನೀಡಿರುವುದರ ಬಗೆಗೆ,
3. ಪರಿಶ್ರಮ ಈಕ್ವಿಟಿ ಷೇರುಗಳನ್ನೊಳಗೊಂಡಂತೆ ಯಾವುದೇ ಷೇರುಗಳನ್ನು ಕಂಪನಿಯ ಉದ್ಯೋಗಿಗಳಿಗೆ ನೀಡಿರುವುದರ ಬಗೆಗೆ
4. ಭವಿಷ್ಯದಲ್ಲಿ "ಮುಂದುವರೆಯುವ ಕಂಪನಿ" ಎಂಬ ಸ್ಥಾನಮಾನದ ಮೇಲೆ ಮತ್ತು ಕಂಪನಿಯ ಭವಿಷ್ಯದ ನಿರ್ವಹಣೆಯ ಮೇಲೆ ಪರಿಣಾಮ ಬೀರುವ ಯಾವುದೇ ಗುರುತರ ಅಥವಾ ಗಣ್ಯವಾದ ಆದೇಶಗಳು ನಿಯಂತ್ರಕರುಗಳಿಂದ ಅಥವಾ ಕೋರ್ಟುಗಳು ಅಥವಾ ಟ್ರಿಬ್ಯುನಲ್‌ಗಳಿಂದ ಬಂದಿರುವುದಿಲ್ಲ.

5. ಪರಿವೀಕ್ಷಣಾ ವರ್ಷದಲ್ಲಿ, ಕಾರ್ಯಸ್ಥಳಗಳಲ್ಲಿ ಮಹಿಳಾ ನೌಕರರ ಮೇಲೆ ಲೈಂಗಿಕ ಹಿಂಸೆ (ತಡೆ, ನಿಷೇಧ ಮತ್ತು ಪರಿಹಾರ) ಕಾನೂನು 2013ರಡಿಯಲ್ಲಿ ಯಾವುದೇ ಮೊಕದ್ದಮೆಗಳನ್ನು ಹೂಡಿರುವುದಿಲ್ಲ.

6. ಪ್ರಸ್ತುತ ವರ್ಷದಲ್ಲಿ ಯಾವುದೇ ವಂಚನೆಯ ಅಪರಾಧ ಪ್ರಕರಣಗಳನ್ನು ಲೆಕ್ಕಪರಿಶೋಧಕರು ವರದಿಮಾಡಿಲ್ಲ.

7. ಕಂಪನಿ ಕಾಯಿದೆ 2013ರ ಸೆಕ್ಷನ್ 188ರ ರೀತ್ಯ ಯಾವುದೇ ಸಂಬಂಧಿತ ಪಕ್ಷಾಕಾರುಗಳೊಂದಿಗಿನ ವ್ಯವಹಾರಗಳು ನಡೆದಿಲ್ಲ.

8. ಕಂಪನಿಯ ವರ್ಷಾಂತ್ಯದಿಂದ ಈ ವರದಿಯ ದಿನಾಂಕದವರೆಗೆ ಕಂಪನಿಯ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಯಾವುದೇ ಗುರುತರ ಬದಲಾವಣೆಗಳಾಗಲಿ ಅಥವಾ ಕಟ್ಟುಪಾಡುಗಳಾಗಲಿ ಇರುವುದಿಲ್ಲ.

**ನಿರ್ದೇಶಕರುಗಳ ಜವಾಬ್ದಾರಿ ನಿರೂಪಣಾ ಹೇಳಿಕೆ**

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 134(5)ರ ಪರಿಪಾಲನೆಯಲ್ಲಿ ನಿಮ್ಮ ನಿರ್ದೇಶಕರು ಹೇಳುವುದೇನೆಂದರೆ :

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಅನ್ವಯವಾಗುವ ಲೆಕ್ಕಪತ್ರ ಮಾನದಂಡಗಳ ಪ್ರಕಾರ ಮತ್ತು ಗುರುತರ ಉಲ್ಲಂಘನೆಗಳ ಬಗೆಗೆ ಉಚಿತ ವಿವರಣೆಗಳನ್ನು ಒಳಗೊಂಡಂತೆ ತಯಾರಿಸಲಾಗಿದೆ.

ಬಿ) ದಿನಾಂಕ 31–3–2016ಕ್ಕೆ ಅಂತ್ಯವಾದ ವರ್ಷದ ಕಂಪನಿಯ ಸ್ಥಿತಿಗತಿಯ ಮತ್ತು ಆ ದಿನಾಂಕದಂದು ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಬಗೆಗೆ ನೈಜ ಮತ್ತು ನ್ಯಾಯವಾದ ನೋಟವನ್ನು ನೀಡಲೋಸುಗ ಅನ್ವಯವಾಗುವಂತಹ ಲೆಕ್ಕಶಾಸ್ತ್ರ ಮಾನದಂಡಗಳನ್ನು, ಉಚಿತ ವಿವೇಚನೆಗಳನ್ನು ಮತ್ತು ಅಂದಾಜುಗಳನ್ನು ಅವರು ಪಾಲಿಸಿದ್ದಾರೆ.

ಸಿ) ಕಂಪನಿಗಳ ಕಾಯಿದೆ ಪ್ರಕಾರ ಕಂಪನಿಯ ಆಸ್ತಿಗಳ ರಕ್ಷಣೆಗಾಗಿ, ವಂಚನೆ ಮತ್ತು ಅಕ್ರಮಗಳನ್ನು ತಡೆಯಲು, ಸಾಕಷ್ಟು ವಿವರವಾದ ಲೆಕ್ಕಪತ್ರಗಳನ್ನಿಡಲು ಅವರು ಸಮರ್ಪಕ ಮತ್ತು ಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ.

ಡಿ) ಕಂಪನಿಯ ಲೆಕ್ಕಪತ್ರಗಳನ್ನು, "ವ್ಯವಹಾರಗಳನ್ನು ಮುಂದುವರಿಸಿಕೊಂಡು ಹೋಗುವ" ಆಧಾರದ ಮೇಲೆ ತಯಾರಿಸಲಾಗಿದೆ.

ಇ) ಕಂಪನಿಯು ಅನುಸರಿಸಬೇಕಿರುವ ಆಂತರಿಕ ಆರ್ಥಿಕ ನಿಯಂತ್ರಕಗಳನ್ನು ಅವರು ಅಳವಡಿಸಿಕೊಂಡಿದ್ದು, ಅವು ಸಾಕಷ್ಟಿದ್ದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

ಎಫ್) ಅನ್ವಯವಾಗುವ ಎಲ್ಲಾ ಕಾಯಿದೆಗಳ ಪಾಲಿಸುವಿಕೆಯನ್ನು ಖಾತರಿಪಡಿಸಿಕೊಳ್ಳಲೋಸುಗ, ಉಚಿತ ಕಾರ್ಯಕ್ರಮಗಳನ್ನು ರಚಿಸಿದ್ದು ಅವುಗಳು ಸಾಕಷ್ಟಿದ್ದು ಮತ್ತು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ.

**ಲೆಕ್ಕ ಪರಿಶೋಧಕರು**

**(i) ಶಾಸನಬದ್ಧ ಲೆಕ್ಕ ಪರಿಶೋಧನೆ**

ನಿಮ್ಮ ಕಂಪನಿಯ ಕಂಪನಿ ಕಾಯಿದೆ 2013ರ ಸೆಕ್ಷನ್ 139ರ ಅನ್ವಯ ಸರ್ಕಾರಿ ಕಂಪನಿಯಾಗಿದ್ದು, ಲೆಕ್ಕ ಪರಿಶೋಧಕರನ್ನು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ರವರು ನೇಮಕ ಮಾಡುತ್ತಾರೆ. ಹಾಗಾಗಿ ಮೆ. ಸುಭಾಷ್ಚಂದ್ರ ಪಿ. ಕುದರಿ ಅಂಡ್ ಕಂಪನಿ,